# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ:30.04.2020**

## ಮಾನ್ಯ ಕಂದಾಯ ಸಚಿವರು ರವರ ನೇತೃತ್ವದಲ್ಲಿ ಮಳೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಬಗ್ಗೆ ಸಭೆ:



ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಮಾನ್ಯ ಕಂದಾಯ ಸಚಿವರು ಆರ್.ಅಶೋಕ್, ಸಂಸದರು ಶ್ರೀ ಪಿ.ಸಿ.ಮೋಹನ್, ಪೂಜ್ಯ ಮಹಾಪೌರರು ರವರು ನೇತೃತ್ವದಲ್ಲಿ ಸಭೆ ನಡೆಯಿತು. ಈ ವೇಳೆ ಮಾನ್ಯ ಉಪಮಹಾಪೌರರು ಶ್ರೀ ರಾಮಮೋಹನ ರಾಜು, ಮಾನ್ಯ ಆಯುಕ್ತರು ಶ್ರೀ ಬಿ.ಹೆಚ್. ಅನಿಲ್ ಕುಮಾರ್, ವಿಶೇಷ ಆಯುಕ್ತರುಗಳಾದ ಶ್ರೀ ಡಿ.ರಂದೀಪ್, ಶ್ರೀ ವೃಷಬೇಂದ್ರ ಮೂರ್ತಿ, ಶ್ರೀ ಅನ್ಬುಕುಮಾರ್, ಶ್ರೀ ರವೀಂದ್ರ, ಶ್ರೀ ಬಸವರಾಜು, ರಾಜಕಾಲುವೆ ವೀಭಾಗದ ಮುಖ್ಯ ಅಭಿಯಂತರರು ಶ್ರೀ ಪ್ರಹ್ಲಾದ್, ವಲಯ ಮುಖ್ಯ ಅಭಿಯಂತರರು ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ತೆಗೆದುಕೊಳ್ಳಬೇಕಾದ ಹಲವು ಮುಂಜಾಗ್ರತಾ ಕ್ರಮಗಳನ್ನು ಕೂಡಲೆ ತೆಗೆದುಕೊಳ್ಳಬೇಕು. ಮಳೆಗಾಲದಲ್ಲಿ ಯಾವುದೇ ಸಮಸ್ಯೆ ಆಗದಂತೆ ಕಾರ್ಯನಿರ್ವಹಿಸಲು ಆಯುಕ್ತರ ನೇತೃತ್ವದಲ್ಲಿ **"ಟಾಸ್ಕ್ ಪೋರ್ಸ್"** ರಚನೆ ಮಾಡುವಂತೆ ಆಯುಕ್ತರಿಗೆ ಕಂದಾಯ ಸಚಿವರು ಆರ್.ಅಶೋಕ್ ರವರು ಸೂಚನೆ ನೀಡಿದರು.

ಸಭೆ ಮುಗಿದ ಬಳಿಕ ಮಾತನಾಡಿದ ಕಂದಾಯ ಸಚಿವರು, ಮಳೆಗಾಲದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಈಗಾಗಲೇ ಪಾಲಿಕೆ ಕೇಂದ್ರ ಕಛೇರಿ ಹಾಗೂ ವಲಯ ಕೇಂದ್ರ ಕಛೇರಿಗಳು ಸೇರಿದಂತೆ ಒಟ್ಟು 9 ಶಾಶ್ವತ ನಿಯಂತ್ರಣ ಕೊಠಡಿಗಳಿದ್ದು, ಅದರ ಜೊತೆಗೆ ವಲಯದ ಪ್ರತಿ ಉಪವಿಭಾಗ ಕಚೇರಿಗಳಲ್ಲಿ 63 ಕಡೆ ತಾತ್ಕಾಲಿಕ ನಿಯಂತ್ರಣ ಕೊಠಡಿಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಬಂಧ ನಿಯಂತ್ರಿಣ ಕೊಠಡಿಗಳ ಸಮರ್ಪಕ ನಿರ್ವಹಣೆಗಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜನೆ ಮಾಡಲು ಸೂಚಿಸಲಾಗಿದೆ. ಅಲ್ಲದೆ ಮಳೆಯಿಂದ ಜಲಾವೃತಗೊಳ್ಳುವ ಪ್ರದೇಶದಲ್ಲಿ ತುರ್ತಾಗಿ ನೀರನ್ನು ಹೊರಹಾಕಲು 16 ಹೈ ಪ್ರಶರ್ ಪಂಪ್ ಹಾಗೂ 2 ತಳ್ಳುವ ಪಂಪ್‌ಗಳು ಇವೆ ಎಂದು ತಿಳಿಸಿದರು.

ಮಳೆಗಾದಲ್ಲಿ ಧರೆಗುರುಳುವ ಮರ, ರೆಂಬೆಗಳನ್ನು ಕೂಡಲೆ ತೆರವುಗೊಳಿಲು 28 ತಂಡಗಳು ಕಾರ್ಯನಿರ್ವಹಿಸುತ್ತಿವೆ. ಅಪಾಯ ಸ್ಥಿಯಲ್ಲಿರುವ, ಒಣ ಮರಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಅಪಾಯ ಸ್ಥಿಯಲ್ಲಿರುವ, ಒಣ ಮರಗಳು ಎಲ್ಲೆಲ್ಲಿವೆ ಎಂದು ಸಮೀಕ್ಷೆ ನಡೆಸಿ ಅದನ್ನು ತೆರವುಗೊಳಿಸಲು ಎಷ್ಟು ವೆಚ್ಚವಾಗಲಿದೆ ಎಂಬ ಅಂದಾಜು ಪಟ್ಟಿ ಸಿದ್ದಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಪಾಲಿಕೆ, ಬೆಸ್ಕಾಂ, ಅಗ್ನಿ ಶಾಮಕ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ(ಜಲಮಂಡಳಿ) ಸಿಬ್ಬಂದಿ ಜೊತೆ ಸಮನ್ವಯ ಸಭೆ ನಡೆಸಬೇಕು. ರಾಜಕಾಲುವೆಯ **Bottle Neck** ಪ್ರದೇಶಗಳಲ್ಲಿ ಕಾಲುವೆ ತೆರವಿಗೆ ಕೂಡಲೆ ಕ್ರಮ ಕೈಗೊಳ್ಳಬೇಕು. ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ಮಳೆ ನೀರು ನುಗ್ಗಿದ ಸಂದರ್ಭದಲ್ಲಿ ಅವರಿಗೆ ಸಮುದಾಯ ಭವನಗಳಲ್ಲಿ ಆಶ್ರಯ ನೀಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ರಸ್ತೆ ಬದಿಯ **Shoulder Drain / Side Drain** ಗಳಲ್ಲಿ ಕಸ ಕಡ್ಡಿ ಸಂಗ್ರಹವಾಗಿ ಮಳೆಗಾಲದಲ್ಲಿ ನೀರು ನಿಲ್ಲುವ ಸಮಸ್ಯೆ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ **Shoulder Drain / Side Drain** ಗಳಲ್ಲಿ ಕೂಡಲೆ ಕಸ/ಕಡ್ಡಿ, ಹೂಳನ್ನು ತೆರವುಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ತೆರವುಗೊಳಿಸದೇ ಇರುವ ಅಧಿಕಾರಿಗಳನ್ನು ಅಮಾನತು ಮಾಡುವುದಾಗಿ ಎಚ್ಚರಿಕೆ ನೀಡಲಾಗಿದೆ. ಅದಲ್ಲದೆ ಮಿಸ್ಸಿಂಗ್ ಸ್ಲ್ಯಾಬ್ಸ್ ಇಲ್ಲದಿರುವುದನ್ನು ಪತ್ತೆ ಮಾಡಿ ಕೂಡಲೆ ದುರಸ್ತಿಪಡಿಸಬೇಕು. ಪ್ರತಿ ವಾರ್ಡ್‌ಗಳಲ್ಲೂ 1 ಶಿಲ್ಟ್ ಅಂಡ್ ಟ್ರಾಕ್ಟರ್ ಕಾರ್ಯನಿರ್ವಹಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಪ್ರಮುಖವಾಗಿ ತಗ್ಗು ಪ್ರದೇಶ ಹಾಗೂ ಪ್ರವಾಹ ಉಂಟಾಗುವ ಪ್ರದೇಶಗಳನ್ನು ಬಣ್ಣದ ಆಧಾರದಮೇಲೆ(ಕೆಂಪು, ಕಿತ್ತಳೆ, ಹಳದಿ ಹಾಗೂ ಹಸಿರು) ಗುರುತಿಸಿ ಮ್ಯಾಪಿಂಗ್ ಮಾಡುವಂತೆ ಸೂಚನೆ ನೀಡಲಾಗಿದೆ. ಅಲ್ಲದೆ 60 ಮಿ.ಮೀ, 80 ಮಿ.ಮೀ, 100 ಮಿ.ಮೀ, 120 ಮಿ.ಮೀ ಮಳೆ ಬಂದರೆ ಯಾವ ಪ್ರದೇಶಗಳು ಜಲಾವೃತಗೊಳ್ಳುತ್ತವೆ ಎಂಬುದರ ಬಗ್ಗೆ ಸಮೀಕ್ಷೆ ಮಾಡಿ ಮ್ಯಾಪಿಂಗ್ ಮಾಡಬೇಕು ಎಂದು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**